ಅ) ಈ ಬಗ್ಗೆ ಜಾಥಾದ ಜಿಲ್ಲಾ ಸಂಚಾಲಕರು ಪೋಲೀಸರಿಗೆ ದೂರು ನೀಡಿದ್ದಾರೆಯೇ ?

ಇ) ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಈ ಜಾತಾದ ಜಿಲ್ಲಾ ಘಟಕದ ವಿಶೇಷ ಸಲಹೆಗಾರರಾಗಿದ್ದಾರೆಂದು ತಿಳಿಸಿದರೂ ಪೋಲೀಸರು ಲಕ್ಷಿಸದೇ ಜಾತಾದವರನ್ನು ಥಳಿಸಿ ಹಿಂಸಿಸಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ನಿಜವಲ್ಲ.

ಆ) ಇಲ್ಲ.

ಇ) ಈ ಬಗ್ಗೆ ನಡೆಸಿದ ತನಿಖೆಯ ಪ್ರಕಾರ ಗೋಕರ್ಣದ ಮಹಾಬಲ ಅಡಿಯವರು ದಿನಾಂಕ 28/29 ನವೆಂಬರ್ ರಾತ್ರಿ ನಡೆದ ವಿಚಾರದ ಬಗ್ಗೆ ಜಾತಾ ತಂಡದ ದಯಾನಂದ ಹಿರೇಮಠ, ಚಂದ್ರಶೇಖರ ಮರಡಿಮಠ ಮತ್ತು ಶ್ರೀನಿವಾಸ ರಾಮರಾಯ ದೇಸಾಯಿ ಎಂಬುವರ ವಿರುದ್ಧ ಸಲ್ಲಿಸಿದ ದೂರನ್ನು ಪೋಲೀಸರು ವಿಚಾರಿಸಿದರು. ದಿನಾಂಕ 3–12–90 ರಂದು ಜಿಲ್ಲಾ ಪೋಲೀಸ್ ಕಛೇರಿಗೆ ಈ ಮೂರು ಜನರು ಗೋಕರ್ಣ ಪೋಲೀಸರ ವಿರುದ್ಧ ಸಲ್ಲಿಸಿದ ದೂರನ್ನು ಕುಮಟ ಸಿ. ಪಿ. ಐ. ವಿಚಾರಣೆ ಮಾಡಲಾಗಿ ಆರೋಪ ಸುಳ್ಳೆಂದು ಸಾಬೀತಾಗಿದೆ. ಆದ್ದರಿಂದ ಪೋಲೀಸರ ವಿರುದ್ಧ ಕ್ರಮ ಕೈಗೊಳ್ಳುವ ಅವಶ್ಯಕತೆಯಿರುವುದಿಲ್ಲ.

ವಿಷಯ :– ಕರ್ನಾಟಕ ಪೋಲೀಸ್ ಇಲಾಖೆಯ ಪುನರ್‌ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 748 (825)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪೋಲೀಸ್ ಇಲಾಖೆಯನ್ನು ಸುವ್ಯವಸ್ಥಿತ ಹಾಗೂ ರಾಜ್ಯದ ಜನಸಂಖ್ಯೆಯ ಅನುಗುಣವಾಗಿ ಪುನರ್ ರಚಿಸಲು ಸರ್ಕಾರದ ಕಾರ್ಯಕ್ರಮವೇನು ?

ಆ) ಪೋಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಎನ್.ಸಿ.ಸಿ. ಶಿಕ್ಷಣ ಪಡೆದಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ನೇಮಿಸಲು ಉದ್ದೇಶವಿದೆಯೇ ?

ಇ) ಇತ್ತೀಚೆಗೆ ಗಲಭೆಗಳು ನಡೆದಾಗ ಬೇರೆ ರಾಜ್ಯದಿಂದ ಎಷ್ಟು ಪೋಲೀಸ್ ಸಿಬ್ಬಂದಿಯನ್ನು ಉಪಯೋಗ ಮಾಡಲಾಗಿದೆ ?

ಈ) ಪೋಲೀಸ್ ಸಿಬ್ಬಂದಿ ವರ್ಗಕ್ಕೆ ವಿಶೇಷವಾದಂತಹ ಹೆಚ್ಚಿನ ವಿಮೆ ಮಾಡಲು ಸರ್ಕಾರದ ಕಾರ್ಯಕ್ರಮವೇನು ?

ಶ್ರೀ ಧರ್ಮಸಿಂಗ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಅ) ರಾಷ್ಟ್ರೀಯ ಪೋಲೀಸ್ ಆಯೋಗದ ಶಿಫಾರಸಿನಂತೆ ರಾಜ್ಯದ ವಿಸ್ತೀರ್ಣ ಮತ್ತು ಜನಸಂಖ್ಯೆಗನುಗುಣವಾಗಿ ಪೋಲೀಸ್ ಠಾಣೆ ಮತ್ತು ಸಿಬ್ಬಂದಿಗಳನ್ನು ವ್ಯವಸ್ಥೆಗೊಳಿಸಲು ಉದ್ದೇಶಿಸಲಾಗಿದೆ.

ಆ) ಇಲ್ಲ.

ಇ) ಸೆಪ್ಟೆಂಬರ್ 1990 ರಿಂದ ಬೇರೆ ಬೇರೆ ಸಂದರ್ಭಗಳಲ್ಲಿ ನೆರೆಯ ರಾಜ್ಯಗಳ ಮತ್ತು ಕೇಂದ್ರ ಮೀಸಲು ಪಡೆಯ ಹನ್ನೆರಡಕ್ಕೂ ಹೆಚ್ಚು ಕಂಪನಿಗಳ ಸಶಸ್ತ್ರ ಪೋಲೀಸ್‌ರನ್ನು ಕರ್ನಾಟಕ ರಾಜ್ಯದಲ್ಲಿ ಉಪಯೋಗಿಸಲಾಗಿದೆ.

ಈ) ಕರ್ತವ್ಯಾವಧಿಯಲ್ಲಿ ಮೃತ ಪಡುವ ಪೋಲೀಸ್ ಸಿಬ್ಬಂದಿಗೆ ಒಂದು ಲಕ್ಷ ರೂಪಾಯಿಗಳನ್ನು ನೀಡುವುದಕ್ಕೆ ಸಂಬಂಧಿಸಿ ಸಾಮೂಹಿಕ ವಿಮಾ ಯೋಜನೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ವಿಷಯ :– ಮೂಡಿಗೆರೆ ತಾಲ್ಲೂಕಿನ ಹರಿಜನ ಗಿರಿಜನ ವಿದ್ಯಾರ್ಥಿಗಳ ಹಾಸ್ಟೆಲ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 751 (1233)

ಶ್ರೀಮತಿ ಮೋಟಮ್ಮ (ಮೂಡಿಗೆರೆ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿಗೆ ಕಾಲೇಜು (ಹರಿಜನ ಗಿರಿಜನ) ವಿದ್ಯಾರ್ಥಿಗಳ ಹಾಸ್ಟೆಲ್ ಮಂಜೂರಾಗಿದ್ದು, ಯಾವಾಗ ? ಹಾಗಿದ್ದಲ್ಲಿ, ಅದರಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

2) ಈ ಹಾಸ್ಟೆಲಿಗೆ ಕಟ್ಟಡ ಸೌಲಭ್ಯ ಒದಗಿಸಲಾಗಿದೆಯೇ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

1) ಈ ಕಾಲೇಜು ವಿದ್ಯಾರ್ಥಿ ನಿಲಯವು 100 ವಿದ್ಯಾರ್ಥಿಗಳಿಗಾಗಿ 1987–88 ನೇ ಸಾಲಿನಲ್ಲಿ ಮಂಜೂರಾಗಿದೆ. ಈಗಿನ ವಿದ್ಯಾರ್ಥಿಗಳ ಸಂಖ್ಯಾಬಲ 40.

2) ಸರ್ಕಾರಿ ಕಟ್ಟಡ ಒದಗಿಸಿರುವುದಿಲ್ಲ. ಈ ವಿದ್ಯಾರ್ಥಿ ನಿಲಯವು ಬಾಡಿಗೆಯ ಕಟ್ಟಡದಲ್ಲಿ ನಡೆಯುತ್ತಿದೆ.

ವಿಷಯ :– ಮಂಡ್ಯ ನಗರದಲ್ಲಿನ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಾಲೇಜು ಬಾಲಕರ ಹಾಸ್ಟೆಲ್ ಕಟ್ಟಡದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 752 (1256)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ನಗರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡದ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ?

ಆ) ಸರ್ಕಾರ ತನ್ನ ಪಾಲಿನ ಅನುದಾನವನ್ನು ಈ ಕಟ್ಟಡದ ನಿರ್ಮಾಣಕ್ಕಾಗಿ ನೀಡಿದೆಯೇ ?

ಇ) ಹಾಗಿದ್ದಲ್ಲಿ, ಈ ನಿರ್ಮಾಣ ಕಾರ್ಯ ಯಾವಾಗ ಮುಗಿಯುತ್ತದೆ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣ ಛಾವಣಿ ಮಟ್ಟದ ಹಂತದಲ್ಲಿದೆ.

ಆ) ಹೌದು.

ಇ) ಮಾರ್ಚ್ 1991 ಕ್ಕೆ ಮುಗಿಯುವ ನಿರೀಕ್ಷೆ ಇದೆ.

ವಿಷಯ :– ರಾಜ್ಯದಲ್ಲಿರುವ ಕಾರ್ಮಿಕ ವಿವಾದಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 754 (1239)

ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಕಾರ್ಮಿಕ ವಿವಾದಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಇವು ಯಾವ ಯಾವ ವಿಷಯಗಳಿಗೆ ಮಾಗೂ ಯಾರಿಂದ ಯಾರ ವಿರುದ್ಧ ಇವೆ. (ಪೂರ್ಣ ವಿವರ ನೀಡುವುದು)

ಇ) ರಾಜ್ಯದ ಎಲ್ಲಾ ಕಾರ್ಮಿಕ ವಿವಾದಗಳನ್ನು ಕಡೇ ಪಕ್ಷ ಎರಡು ವರ್ಷಗಳೊಳಗೆ ಇತ್ಯರ್ಥ ಮಾಡುವಂತೆ ಮಾಡಲು ಸರ್ಕಾರದವರು 'ವಿಶೇಷ ಕಾರ್ಮಿಕ ನ್ಯಾಯಾಲಯಗಳನ್ನು' ತೆರೆಯಲು ಕ್ರಮ ಕೈಗೊಳ್ಳುವರೇ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :–

ಅ) 11, 750.

ಆ) ಇವುಗಳು ಸಾಮಾನ್ಯವಾಗಿ ವೇತನ ಮತ್ತು ಭತ್ಯೆಗಳ ಹೆಚ್ಚಳ ಮಾಗೂ ಕೆಲಸಗಾರರನ್ನು ವಜಾ ಮಾಡಿರುವ ಬಗ್ಗೆ ಸಂಬಂಧಿಸಿರುತ್ತವೆ. ಪ್ರತಿ ವಿವಾದಗಳ ಬಗ್ಗೆ ವಿವರ ನೀಡಲು ಸಾಧ್ಯವಾಗುವುದಿಲ್ಲ. ಕಾರಣ ಅವುಗಳು ಮೇಲೆ ತಿಳಿಸಿದಂತೆ ಸಾವಿರಾರು ಸಂಖ್ಯೆಯಲ್ಲಿವೆ.

ಇ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.